# ಕರ್ನಾಟಕ ಸರ್ಕಾರ
# ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ;ಸಿ7(1)ಸ.ಶಾಲಾ.ದೇಣಿಗೆ.01/2022-23 ದಿನಾಂಕ:19-10-2022

## ಸುತ್ತೋಲೆ

ವಿಷಯ: ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯು (ಎಸ್.ಡಿ.ಎಂ.ಸಿ) ಶಾಲೆಯ ಅಭಿವೃದ್ಧಿಗಾಗಿ ದಾನ/ದೇಣಿಗೆಗಳನ್ನು ಸ್ವೀಕರಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ:ಇಡಿ.1 ಪಿ.ಬಿ.ಎಸ್. 2001 ಬೆಂಗಳೂರು ದಿನಾಂಕ: 28-04-2001

2) ಸರ್ಕಾರದ ಅಧಿಸೂಚನೆ ಸಂಖ್ಯೆ.ಇಡಿ.122 ಪಿ.ಬಿ.ಎಸ್ 2004 ಬೆಂಗಳೂರು ದಿನಾಂಕ:14-06-2006

********************

ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣದ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ರಚನೆ ಹಾಗೂ ಅವುಗಳ ಕಾರ್ಯ ನಿರ್ವಹಣೆಗಳ ಕುರಿತು ಉಲ್ಲೇಖಿತ ಸರ್ಕಾರದ ಆದೇಶಗಳಲ್ಲಿ ವಿಸ್ತೃತವಾಗಿ ಸೂಚನೆಗಳನ್ನು ನೀಡಲಾಗಿದೆ ಹಾಗೂ **ಮಾರ್ಗದರ್ಶನವನ್ನು** ಕಾಲಕಾಲಕ್ಕೆ ಹೊರಡಿಸಲಾಗಿದೆ.

ಸರ್ಕಾರಿ ಶಾಲೆಗಳಲ್ಲಿ ಸಮುದಾಯದ ಪೋಷಕರ ಪಾಲ್ಗೊಳ್ಳುವಿಕೆ ಅನಿವಾರ್ಯವಾಗಿದ್ದು ಈ ನಿಟ್ಟಿನಲ್ಲಿ ಶಾಲೆಯ ಶೈಕ್ಷಣಿಕ ಅಭಿವೃದ್ಧಿಗಾಗಿ ಶಾಲಾಭಿವೃದ್ಧಿ ಸಮಿತಿಗಳನ್ನು ರಚಿಸಿದ್ದು ಶಾಲೆ ಅಭಿವೃದ್ಧಿಗೆ ಪೂರಕ ಕಾರ್ಯಗಳನ್ನು ಕೈಗೊಳ್ಳುವಂತೆ ತಿಳಿಸಲಾಗಿದೆ. ಸರ್ಕಾರವು ಶಿಕ್ಷಣ ಇಲಾಖೆಗೆ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಆಯವ್ಯಯದಲ್ಲಿ ಅನುದಾನವನ್ನು ಬಿಡುಗಡೆಮಾಡುತ್ತಿದೆ.

ಕೆಲವೊಮ್ಮೆ ಸದರಿ ಅನುದಾನದ ಜೊತೆಗೆ ಹಾಗೂ ಶಾಲೆಗಳ ಸ್ಥಳೀಯ ಅಗತ್ಯತೆಯಂತೆ ಹೆಚ್ಚುವರಿ ಹಣಕಾಸಿನ ನೆರವು ಅಗತ್ಯವಾಗಿ ಬೇಕಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಕೆಲವೊಮ್ಮೆ ಅಗತ್ಯ ಶಿಕ್ಷರ ಕೊರತೆ ಉಂಟಾದಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕ ವಾತಾವರಣ ಇಲ್ಲದಂತಾಗಿ ಮಕ್ಕಳು ಶೈಕ್ಷಣಿಕ ಚಟುವಟಿಕೆಗಳು ಹಿನ್ನಡೆ ಉಂಟಾಗುವ ಸಂಭವವಿದ್ದು ಇದನ್ನು ತಪ್ಪಿಸುವ ಸಲುವಾಗಿ ಸರ್ಕಾರ/ಇಲಾಖೆ ಕಾಲಕಾಲಕ್ಕೆ ಆದೇಶಿಸಿರುವಂತೆ ಎಸ್.ಡಿ.ಎಂ.ಸಿ. ಸಮಿತಿಯು ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ಮಕ್ಕಳಿಗೆ ಪಾಠ-ಪ್ರವಚನಗಳನ್ನು ಮಾಡಲು ಕ್ರಮವಹಿಸಿದಲ್ಲಿ ಮಕ್ಕಳ ಬೋಧನೆಗೆ ಸಹಾಯಕಾರಿಯಾಗುತ್ತದೆ. ಕೆಲವೊಮ್ಮೆ ಮಂಜೂರಾತಿ ಇಲ್ಲದಯೇ ಹಾಗೂ ಅನುದಾನ ಕೊರತೆ ಉಂಟಾದಲ್ಲಿ ಶಾಲಾಭಿವೃದ್ಧಿ ಸಮಿತಿ ಇಂತಹ ಸನ್ನಿವೇಶಗಳಲ್ಲಿ ಕರ್ತವ್ಯ ನಿರ್ವಹಿಸಲು ಸಹಕಾರವಾಗಬಹುದಾಗಿದೆ.

ಹಾಗೂ ಸರ್ಕಾರಿ ಶಾಲೆಗಳಲ್ಲಿ ಅನಿರೀಕ್ಷಿತವಾಗಿ ಉಂಟಾಗುವ ಶಾಲೆಯ ಸಣ್ಣ ಪ್ರಮಾಣದ ದುರಸ್ಥಿ, ಶಾಲಾ ಶುಚಿತ್ವ, ಶಾಲಾ ಶೈಕ್ಷಣಿಕ ಚಟುವಟಿಕೆಗಳು, ಇತ್ಯಾದಿ ತುರ್ತು ವೆಚ್ಚಗಳಿಗೆ ಸಹಕಾರಿಯಾಗಲೆಂದು ಸರ್ಕಾರಿ ಶಾಲೆಗಳಲ್ಲಿ ಶಾಲೆಯ ಶೈಕ್ಷಣಿಕ ಅಭಿವೃದ್ಧಿಗಾಗಿ "ನಮ್ಮ ಶಾಲೆ ನನ್ನ

ಕೊಡುಗೆ" ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸಾರ್ವಜನಿಕರಿಂದ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಆರ್ಥಿಕ ಸಹಾಯವನ್ನು ಕೊಡುಗೆ /ದಾನದ ರೂಪದಲ್ಲಿ ಪಡೆಯಲು ಅನುಮತಿ ನೀಡಲಾಗಿದೆ.

ಆದರೂ ಸಹ ಶಾಲೆಯ ಪೋಷಕರಿಗೆ ಹೆಚ್ಚು ಹೆಚ್ಚು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹಾಗೂ ಶಾಲೆಯಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಗಮನಕೊಡುವ ಉದ್ದೇಶದಿಂದ ಹಾಗೂ ಸರ್ಕಾರಿ ಶಾಲೆಯು ನಮ್ಮ ಶಾಲೆ ಎಂಬ ಭಾವನೆ ಮೂಡುವ ಉದ್ದೇಶದಿಂದ ಉಲ್ಲೇಖ(1)ರ ಎಸ್.ಡಿ.ಎಂ.ಸಿ ಅಧಿಸೂಚನೆಯ ಕಂಡಿಕೆ 02ರ N ಹಾಗೂ ಕಂಡಿಕೆ 10 R ರಲ್ಲಿ ನೀಡಿರುವ ಅಧಿಕಾರದಂತೆ ಸ್ವ ಇಚ್ಛೆಯಿಂದ ದಾನ/ದೇಣಿಗೆ ನೀಡಲಿಚ್ಛಿಸುವ ವ್ಯಕ್ತಿಗಳಿಂದ ದೇಣಿಗೆ ರೂಪದಲ್ಲಿ ಹಣ ಅಥವಾ ವಸ್ತುಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿರುವ ಹಿನ್ನಲೆಯಲ್ಲಿ

ವಿದ್ಯಾರ್ಥಿಗಳ ಪೋಷಕರಿಂದ ಪಡೆಯಬಹುದಾದ ದಾನ, ಸ್ವಯಿಚ್ಛೆಯಿಂದ ನೀಡುವ ಕೊಡುಗೆ, ಹಾಗೂ ದೇಣಿಗೆ ರೂಪದಲ್ಲಿ ಮಾಸಿಕ ಸುಮಾರು ರೂ.100/-ಗಳಂತೆ ಹಣವನ್ನು ಸಂಗ್ರಹಿಸಿ ಸದರಿ ಹಣವನ್ನು ನಿಗಧಿತ ಎಸ್.ಡಿ.ಎಂ.ಸಿ ಖಾತೆಗೆ (S.D.M.C A/c) ಪೋಷಕರಿಂದ ಸಂದಾಯ ಮಾಡಲು ಕ್ರಮವಹಿಸುವುದು. ಹಾಗೂ ಎಸ್.ಡಿ.ಎಂ.ಸಿ ನಿಯಮಾವಳಿಗಳ ಪ್ರಕಾರ ನಿಗಧಿತ ರಶೀದಿಯನ್ನು ನೀಡಿ ಅವುಗಳಿಗೆ ಪ್ರತ್ಯೇಕ ಲೆಕ್ಕಪತ್ರಗಳನ್ನು ಇಡುವ ಜವಾಬ್ದಾರಿಯನ್ನು ಎಸ್.ಡಿ.ಎಂ.ಸಿ ಸದಸ್ಯ ಕಾರ್ಯದರ್ಶಿಯು ನಿರ್ವಹಿಸತಕ್ಕದ್ದು ಹಾಗೂ ಸದರಿ ಹಣವನ್ನು ಎಸ್.ಡಿ.ಎಂ.ಸಿ ಯ ನಿಯಮಗಳ ಮಿತಿಯಲ್ಲಿ ಆದ್ಯತೆಮೇರೆಗೆ ಈಕೆಳಕಂಡ **ಕಾರ್ಯ**ಗಳಿಗೆ ವೆಚ್ಚಮಾಡತಕ್ಕದ್ದು

ಪ್ರಥಮ ಆಧ್ಯತೆಯಾಗಿ

1) ಕುಡಿಯುವ ನೀರು
2) ಶೌಚಾಲಯಗಳನ್ನು ಮತ್ತು ಶಾಲೆಯನ್ನು ಶುಚಿಗೊಳಿಸಲು
3) ಶಾಲೆಯ ವಿದ್ಯುತ್ ಬಿಲ್ಲು
4) ಶಾಲೆಯಲ್ಲಿನ ಪರಿಕರಗಳ ತುರ್ತು ರಿಪೇರಿಗಳು
5) ಮಕ್ಕಳು ಬಿಸಿಯೂಟ ಸೇವಿಸಲು ಮಕ್ಕಳಿಗೆ ಸಹಕಾರಿಯಾಗುವಂತಹ ಪೂರಕ ವಸ್ತುಗಳು.
6) ಇಲಾಖೆಯು ಹೆಚ್ಚುವರಿ ಶಿಕ್ಷಕರನ್ನು ಒದಗಿಸಿದ್ದರೂ ಹೆಚ್ಚುವರಿಯಾಗಿ ಅತಿಥಿ ಶಿಕ್ಷಕರನ್ನು ಶೈಕ್ಷಣಿಕ ಚಟುವಟಿಕೆಗಳಿಗೆ ಬಳಸಿಕೊಂಡಲ್ಲಿ ಅವರಿಗೆ ನೀಡುವ ಗೌರವ ಸಂಭಾವನೆ
7) ಗಣಕಯಂತ್ರಗಳ ರಿಪೇರಿ
8) ಅಗತ್ಯ ಬೋಧನೋಪಕರಣಗಳ ಸಂಗ್ರಹಣೆ

ದ್ವಿತಿಯ ಆದ್ಯತೆಯಾಗಿ:

1) ಮಕ್ಕಳ ಉಪಯೋಗಕ್ಕಾಗಿ ಬೆಂಚ್ ಅಥವಾ ಡೆಸ್ಕ್‌ಗಳು,
2) ಶಾಲಾ ಆಟದ ಮೈದಾನದ ಸಿದ್ದತೆ
3) ಇ – ಕಲಿಕಾ ಕೇಂದ್ರ ಸ್ಥಾಪನೆ ಶಾಲೆಯ
4) ಗ್ರಂಥಾಲಯ/ ವಾಚನಾಲಯ ಬಲವರ್ಧನೆ.
5) ಸ್ಕೌಟ್ಸ್‌ಗೈಡ್ಸ್ ಎನ್.ಎಸ್.ಎಸ್ /ಎನ್.ಸಿ.ಸಿ.ಕ್ರೀಡಾ ಮಕ್ಕಳಿಗೆ ಅಗತ್ಯ ಸಮವಸ್ತ್ರ /ಸಾಮಾಗಿಗಳು
6) ಶಾಲಾವನ ಬಲವರ್ದನೆಗಾಗಿ
7) ಅತ್ಯಂತ ಅವಶ್ಯಕವಾಗಿ ಮಾಡಲೇಬೇಕಾದ ಇತರೆ ವೆಚ್ಚ

ಶಾಲೆಯಲ್ಲಿ ಅಗತ್ಯವಿರುವ ತುರ್ತು ಕ್ರಮಗಳ ಬಗ್ಗೆ ಎಸ್.ಡಿ.ಎಂಸಿ.ಸಭೆಯಲ್ಲಿ ವಿವರವಾಗಿ ಚರ್ಚಿಸಿ ಅನುಮೋದನೆ ಪಡೆದು ವೆಚ್ಚಮಾಡಲು ಅನುಮತಿಸತಕ್ಕದ್ದು.

ಪ್ರತಿ ಮೂರು ತಿಂಗಳಿಗೊಮ್ಮೆ ಪೋಷಕರು/ತಂದೆ ತಾಯಂದಿರ ಸಭೆಯನ್ನು ನಡೆಸಿ ಶಾಲೆಯಲ್ಲಿ ಅಗತ್ಯವಿರುವ ಮೇಲ್ಕಂಡ ಚಟುವಟಿಕೆಗಳಿಗೆ ಅನುದಾನ ಮತ್ತು ಪ್ರಗತಿ ಬಗ್ಗೆ ವಿವರಣೆ ನೀಡತಕ್ಕದ್ದು. ಇತರೆ ಆದ್ಯತೆ ಕ್ರಮಗಳ ಬಗ್ಗೆಯೂ ಸಹ ಸಭೆಯಲ್ಲಿ ವಿವರಿಸಿ/ಚರ್ಚಿಸಿ ನಡಾವಳಿ ದಾಖಲಿಸುವುದು ಮುಂದಿನ ಸಭೆಯಲ್ಲಿ ನಡಾವಳಿಯನ್ನು ಓದಿ ತಿಳಿಸಿ ಅನುಪಾಲನೆಮಾಡುವುದು.

**ಯಾವುದೇ ಕಾರಣಕ್ಕೂ ಯಾವುದೇ ಪೋಷಕರಿಂದ ಬಲವಂತವಾಗಿ ಹಣವನ್ನು / ದಾನ/ದೇಣಿಗೆಯನ್ನು ಸಂಗ್ರಹಿಸುವುದನ್ನು ನಿರ್ಭಂದಿಸುತ್ತದೆ. ಆದರೆ ಪೋಷಕರ ಮನ ಒಲಿಸಿ ಶಾಲೆಯ ಅಗತ್ಯ ಖರ್ಚುವೆಚ್ಚಗಳನ್ನು ಮನವರಿಕೆ ಮಾಡಿಕೊಟ್ಟು ಪೋಷಕರು ಸ್ವಯಂ ಪ್ರೇರಿತವಾಗಿ ಎಸ್.ಡಿ.ಎಂ.ಸಿ ಖಾತೆಗೆ ಹಣ ನೀಡುವಂತೆ ಮಾಡುವುದು. ಈ ಖಾತೆಯಲ್ಲಿ ಸ್ವೀಕರಿಸಿದ ಹಣದಿಂದ ಮೇಲೆ ವಿವರಿಸಿರುವ ಆದ್ಯತೆಗಳ ಅನುಸಾರ ವೆಚ್ಚಮಾಡಲು ಕ್ರಮವಹಿಸತಕ್ಕದ್ದು.**

ಆಯುಕ್ತರು 19/10/2022.
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ,

1) ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
3) ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ.

ಪ್ರತಿಯನ್ನು;

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ
2) ಅಪರ ಆಯುಕ್ತರು, ಸಾ.ಶಿ.ಇಲಾಖೆ, ಗುಲ್ಬರ್ಗಾ
3) ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ ವಿಭಾಗ
4) ಕಛೇರಿ ಪ್ರತಿ.